ಶಿವಮೊಗ್ಗದಲ್ಲಿರುವ ಕಳದಿ ಶಿವಪ್ಪನಾಯಕನ ಅರಮನೆ ಅಭಿವೃದ್ಧಿ ಬಗ್ಗೆ.

೮೨೮. ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ).—ಮಾನ್ಯ ವಾರ್ತಾ, ಯುವಜನ ಸೇವೆ, ಕ್ರೀಡಾ ಹಾಗೂ ಪ್ರವಾಸೋದ್ಯಮ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗದಲ್ಲಿರುವ ಕಳದಿ ಶಿವಪ್ಪನಾಯಕನ ಅರಮನೆಯನ್ನು ಅಭಿವೃದ್ಧಿಪಡಿಸುವ ಕಾರ್ಯಕ್ರಮ ಏನಾದರೂ ಸರ್ಕಾರದಲ್ಲಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರದವರು ತ್ವರಿತವಾಗಿ ಈ ಐತಿಹಾಸಿಕ ಕೇಂದ್ರದ ರಕ್ಷಣೆ ಮತ್ತು ಅಭಿವೃದ್ಧಿಯ ಬಗ್ಗೆ ಕ್ರಮ ಕೈಗೊಳ್ಳುವರೇ?

ಶ್ರೀ ಜೀವರಾಜ ಆಳ್ವ (ವಾರ್ತಾ ಯುವಜನ ಸೇವಾ ಕ್ರೀಡಾ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು).—

ಅ) ಶಿವಮೊಗ್ಗದಲ್ಲಿಯ ''ಕಳದಿ ಶಿವಪ್ಪನಾಯಕ'' ಅರಮನೆಯ ಸಂರಕ್ಷಣಾ ಕಾರ್ಯಕ್ರಮವನ್ನು ಪ್ರಾಚ್ಯವಸ್ತು ಇಲಾಖೆಯು ೧೯೮೪ನೇ ಆಗಸ್ಟ್ ಕೊನೆಯ ವಾರದಿಂದ ನಡೆಸುತ್ತಿದೆ. ಈ ಕಾರ್ಯಕ್ರಮವು ಹೆಚ್ಚು ಕಡಿಮೆ ಮುಗಿದಿದ್ದು ಇಲ್ಲಿ ಪುರಾತತ್ವ ಸಂಗ್ರಹಾಲಯವನ್ನು ಸ್ಥಾಪಿಸುವ ಕಾರ್ಯವು ಭರದಿಂದ ಸಾಗಿದೆ. ಇದುವರೆಗೆ ಈ ಸ್ಮಾರಕದ ಸಂರಕ್ಷಣೆಗೆ ಮತ್ತು ಇಲ್ಲಿ ಪುರಾತತ್ವ ಸಂಗ್ರಹಾಲಯ ಸ್ಥಾಪಿಸಲು ಒಟ್ಟು ಸುಮಾರು ೪,೯೫,೦೦೦ ರೂಪಾಯಿಗಳು ಖರ್ಚು ಮಾಡಲಾಗಿದೆ. ಕೆಲಸಗಳು ಮುಂದುವರಿದಿವೆ. ಈ ಅರಮನೆಯ ಸುತ್ತಲೂ ಸಾಧ್ಯವಾದಡೆಗಳಲ್ಲಿ ತಕ್ಕುದಾದ ಹುಲ್ಲಿನ ಮೈದಾನ ಮತ್ತು ಹೂವಿನ ಗಿಡಗಳನ್ನು ಬೆಳಸುವ ಉದ್ದೇಶದಿಂದ ತೋಟಗಾರಿಕೆ ಇಲಾಖೆಯೊಡನೆ ವ್ಯವಹರಿಸಲಾಗುತ್ತಿದೆ. ಈ ಇಲಾಖೆಯು ಕ್ರಮಕ್ಕೆಗೊಂಡಿದೆ.

ಶಿವಪ್ಪನಾಯಕ ಅರಮನೆಯ ಸಂರಕ್ಷಣೆ ಮತ್ತು ಅಲ್ಲಿ ಪುರಾತತ್ವ ಸಂಗ್ರಹಾಲಯವನ್ನು ಸ್ಥಾಪಿಸುವ ಕಾರ್ಯಕ್ರಮಗಳನ್ನು ಇಲಾಖೆಯ ಶತಮಾನೋತ್ಸವದ ಕಾರ್ಯಕ್ರಮದ ಅಂಗವಾಗಿ ಹಮ್ಮಿಕೊಳ್ಳಲಾಗಿದೆ. ಸಂರಕ್ಷಿತ ಈ ಸ್ಮಾರಕವನ್ನು ಮತ್ತು ಪುರಾತತ್ವ ಸಂಗ್ರಹಾಲಯವನ್ನು ಜನರ ವೀಕ್ಷಣೆಗೋಸ್ಕರ ತೆರವು ಮಾಡಲು ಉದ್ಘಾಟನಾ ಸಮಾರಂಭವನ್ನು ವಿರ್ಪಡಿಸಲಾಗುತ್ತಿದೆ. ಪ್ರಾಯಶಃ ಈ ತಿಂಗಳ ಕೊನೆಯ ವಾರದಲ್ಲಿ ಉದ್ಘಾಟನಾ ಸಮಾರಂಭವನ್ನು ಇಟ್ಟುಕೊಳ್ಳಬಹುದು.

ಆ) ಮೇಲೆ ಹೇಳಿದಂತೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ರಾಜ್ಯದಲ್ಲಿ ಜನಸಂಖ್ಯೆ ನಿಯಂತ್ರಣ.

೧೦೩೦. ಶ್ರೀ ಜಿ. ರಾಜೂಗೌಡ (ಹನೂರು).— ಮಾಷ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಪ್ರಶ್ನೆಗೆ ದಯೆಯಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಎಷ್ಟು ಸೆಕೆಂಡಿಗೆ ಒಂದು ಮಗು ಜನನವಾಗುತ್ತದೆ?

ಆ) ಗರ್ಭನಿರೋಧಕ ಉಪಕರಣ ಬಳಕೆ ಹಾಗೂ ಜನನ ನಿಯಂತ್ರಣ ಶಸ್ತ್ರಚಿಕಿತ್ಸೆಯಲ್ಲಿ ಕಳೆದ ಮೂರು ತಿಂಗಳಿಂದ ಹೇಕಡಾ ಎಷ್ಟು ಹೆಚ್ಚಳವಾಗಿದೆ.

ಇ) ಇದೇ ಗತಿಯಲ್ಲಿ ಕಾರ್ಯಕ್ರಮ ಮುಂದುವರಿದರೆ ಈ ಶತಮಾನದ ಅಂತ್ಯಕ್ಕೆ ರಾಜ್ಯದ ಜನಸಂಖ್ಯೆಯನ್ನು ಎಷ್ಟಕ್ಕೆ ನಿಯಂತ್ರಿಸಬಹುದು.